# 37

# ಪ್ರೋತ್ಸಾಹದ ಸಂದೇಶ

# (13:14-43)

ಪೌಲ ಮತ್ತು ಬಾರ್ನಬರು ಪಂಫುಲ್ಯದ ಕಠಿಣವಾದ ಬೆಟ್ಟದ ತಪ್ಪಲನ್ನು ಹಾದು, ಪಿಸಿದ್ಯದ ಅಂತಿಯೋಕ್ಯಕ್ಕೆ ಬಂದರು.[1] ಸಿರಿಯಾದ ಅಂತಿಯೋಕ್ಯದಂತೆ, ಸೆಲ್ಯೂಕಸನು ನಿಕೇಟರನು ತನ್ನ ತಂದೆಯಾದ ಅನ್ಟ್‌ಕೋಸ್ Iನ ನೆನಪಿನಾರ್ಥವಾಗಿ ಈ ಹೆಸರನ್ನು ಇಟ್ಟಿದ್ದನು. ಅದು ಪೂರ್ವ ಹಾಗು ಪಶ್ಚಿಮದ ನಡುವೆ ಇದ್ದ ವ್ಯವಹಾರದ ಕೇಂದ್ರವಾಗಿತ್ತು, ಅದು ನಾಗರೀಕರು ಹಾಗು ಸೈನ್ಯದ ಕೇಂದ್ರವಿದ್ದ ಗಲಾತ್ಯದ ಪ್ರದೇಶವಾಗಿತ್ತು.

ಆ ಪಟ್ಟಣಕ್ಕೆ ಸಬ್ಬತ್ ದಿನದ ಮೊದಲನೆಯ ದಿನವಾಗಿದ್ದರಿಂದ, ಅವರ ಪದ್ಧತಿಯ[2] ಪ್ರಕಾರ "ಅವರು ಸಭಾಮಂದಿರಕ್ಕೆ ಹೋಗಿ ಕೂತುಕೊಂಡರು" (13:14).[3] (ಧರ್ಮೋಪದೇಶ ಕಾಂಡ 6:4-9) ರಂತೆ: "ಇಸ್ರಾಯೇಲ್ಯರೇ ಕೇಳಿರಿ! ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು ಎಂದು ಹೇಳಿ ಆರಾಧನೆಯನ್ನು ಪ್ರಾರಂಭಿಸಿದರು; ..." ಇದು ನಂತರ ಪ್ರಾರ್ಥನೆಯ ಮೂಲಕ ಮುಂದುವರೆದಿರಬಹುದು, ಮತ್ತು ಧರ್ಮಶಾಸ್ತ್ರವನ್ನು ಓದುವದು, ಮತ್ತು ಪ್ರವಾದಿಗಳ ಗ್ರಂಥವನ್ನು ಓದುತ್ತಿದ್ದರು. ನಂತರ ಓದಿದ ವಾಕ್ಯವನ್ನು ವಿವರಿಸುವ ಸಮಯವಾ ಗಿತ್ತು. ಓದುವವನು ಪಾಠವನ್ನು ಹೇಳುತ್ತಿದ್ದನು (ಲೂಕ 4:16-20), ಅಥವಾ ಅಲ್ಲಿರುವ ಮೇಲ್ವಿ ಚಾರಕನು, ಅಥವಾ ಒಬ್ಬ ಪುರುಷನು ಆ ಕಾರ್ಯವನ್ನು ಮಾಡುತ್ತಿದ್ದನು.

ನಂತರ ಆ ಸಭೆಯ ಯಜಮಾನನು [ಪೌಲ ಬರ್ನಬರಿಗೆ] "ಸಹೋದರರೇ, ಜನರಿಗೆ ಹೇಳತಕ್ಕ ಬುದ್ಧಿ ಮಾತೇನಾದರು ನಿಮಗಿದ್ದರೆ ಹೇಳಿರಿ" (13:15). ಪೌಲ ಬಾರ್ನಬರಿಗೆ ಏಕೆ ಈ ಅವಕಾಶವನ್ನು ನೀಡಲಾಯಿತು? ಅತಿಥಿಗಳನ್ನು ಗೌರವಪೂರ್ವಕವಾಗಿ ಆಹ್ವಾನಿಸುವದು ಆ ಸಭಾಮಂದಿರದ ಪದ್ಧತಿಯಾಗಿರಬಹುದು. ಪ್ರಾಯಶಃ ಪೌಲ ಬಾರ್ನಬರು ಈಗಾಗಲೇ ಅಂತಿಯೋಕ್ಯದಲ್ಲಿ ಪ್ರಸಂಗಿಸಿರಬಹುದು. ಮತ್ತು ಅಲ್ಲಿನ ಅಧಿಕಾರಿ ವರ್ಗದವರು ಇವರ ತತ್ವದ ಕುರಿತು ಆಸಕ್ತಿಯನ್ನು ಹೊಂದಿರಬಹುದು. ಕೂಟದ ಮೊದಲೇ ಅವರು ಇವರಿಬ್ಬರನ್ನು ಸಂಧಿಸಿದಾಗ, ಪೌಲನು ತಾನು ಗಮಲೀಯೇಲನ ಪಾದ ಸನ್ನಿಧಾನದಲ್ಲಿ ಕಲಿತವನೆಂಬ ವಿಷಯವನ್ನು ತಿಳಿಸಿರಬಹುದು. ಪೌಲ ಬಾರ್ನಬರು ರಬ್ಬಿಗಳ ಹಾಗೆ *ಕಾಣಿಸಿರಬಹುದು.* ಕಾರಣವೇನೆ ಇರಲಿ, ಯೇಸುವಿನ ರಾಯಬಾರಿಗಳು ಅಲಕ್ಷಕ್ಕೆ ಒಳಗಾಗಲಿಲ್ಲ.

ಅಲ್ಲಿರುವ ಅಧಿಕಾರಿಗಳು "ಬುದ್ಧಿಮಾತಿಗಾಗಿ ಕೇಳಿಕೊಂಡರು." ಬುದ್ಧಿ ಮಾತನ್ನು ಅಪೊಸ್ತಲರಕೃತ್ಯ 4:36ರಂತೆ[4] ಗ್ರೀಕ್ ಭಾಷೆಯಲ್ಲಿ "ಪ್ರೋತ್ಸಾಹ" ಎಂದು ತರ್ಜುಮೆ ಮಾಡಲಾಗಿದೆ (ಬಾರ್ನಬನನ್ನು "ಪ್ರೋತ್ಸಾಹದ ಮಗನು" ಎಂದು ಕರೆಯಲಾಗಿದೆ). NIVಯಲ್ಲಿ "ಸಹೋದರರೇ, ಜನರಿಗೆ ಹೇಳತಕ್ಕ *ಪ್ರೋತ್ಸಾಹದ ಮಾತುಗಳಿದ್ದರೆ,* ದಯವಿಟ್ಟು ಹೇಳಿರಿ." (ಒತ್ತಿ ಹೇಳಿದ್ದು ನನ್ನದು.) ಸಮಯವು ಕಷ್ಟಕರವಾಗಿದ್ದರೂ, "ಪ್ರೋತ್ಸಾಹದ ಮಾತುಗಳು" ಮಾತ್ರ ಯಾವಾಗಲೂ (ಈಗಲೂ) ಕ್ರಮಬದ್ಧವಾಗಿರುತ್ತವೆ.

ಅವರು ಪ್ರೋತ್ಸಾಹದ ಮಾತುಗಳಿಗಾಗಿ ಮನವಿ ಮಾಡಿಕೊಂಡಾಗ ಪ್ರೋತ್ಸಾಹದ ಮಗನು ಸ್ವಾಭಾವಿಕವಾಗಿ ಪ್ರತಿಕ್ರಿಯಿಸಲು ಸಾಧ್ಯವಿತ್ತು. ಆದರೆ ಪೌಲನು, ಎದ್ದು ನಿಂತು ಮಾತನಾಡಿದನು. ಈಗ ಅವನ ನಾಯಕತ್ವವನ್ನು ಒಪ್ಪಿಕೊಳ್ಳಲಾಗಿತ್ತು.

ಒಬ್ಬ ಪ್ರಸಂಗಿಗೆ *"ಒಂದು ಮಾತು"* ಹೇಳೆಂದರೆ ಬಹುಶಃ ಒಂದು ಪ್ರಸಂಗವನ್ನೆ ಮಾಡಬಹುದು - ಪೌಲನು ಇದರಿಂದ ಹೊರತಾಗಿರಲಿಲ್ಲ 13:16-41ರವರೆಗೆ, ಪೌಲನ

ಮೊದಲ ಪ್ರಸಂಗವು ದಾಖಲಾಗಿದೆ. ಪೌಲನು ದೀಕ್ಷಾಸ್ನಾನದ ನಂತರ, ಸಭಾಮಂದಿರಗಳಲ್ಲಿ ಯೇಸುವನ್ನು "ಪ್ರಚುರಪಡಿಸಿದನು, ... ಆತನೇ ದೇವಕುಮಾರನೆಂದು ಯೆಹೂದ್ಯರಿಗೆ ದೃಢಪಡಿಸಿದ್ದನು" (9:20, 22). ಯೆಹೂದ್ಯರ ಸಭಾಮಂದಿರದಲ್ಲಿ ಪೌಲನು ಮಾಡಿದ ಪ್ರಸಂಗದ ಮಾದರಿಯನ್ನು ಲೂಕನು ಇಲ್ಲಿ ನೀಡಿರುವನು.[5]

ಅಂತಿಯೋಕ್ಯದ ಸಭಾಮಂದಿರದಲ್ಲಿ ಪೌಲನು ಶಾಸ್ತ್ರೀಯ ಪ್ರಸಂಗವನ್ನು ಮಾಡಿರುವನು. ಪ್ರತಿ ಪ್ರಸಂಗಗಳಲ್ಲಿ ಮೂರು ಭಾಗಗಳಾಗಿರುತ್ತವೆ: ಮನ್ನುಡಿ, ಮುಖ್ಯ ಸಂದೇಶ, ಮುಕ್ತಾಯ. ಪೌಲನ ಪ್ರಸಂಗದಲ್ಲಿ ಈ ಮೂರು ವಿಷಯಗಳು ಅಡಕವಾಗಿವೆ. ನೀಯೋ ಪೈಟೇ ಎಂಬ ಪ್ರಸಂಗಿಗಳು ಹಾಸ್ಯಮಯವಾಗಿ ಹೇಳಿ ಮುಖ್ಯ ಸಂದೇಶದಲ್ಲಿ "ಮೂರು ಅಂಶಗಳು ಮತ್ತು ಒಂದು ಪದ್ಯವಿರಬೇಕು." ಪೌಲನ ಸಂದೇಶದಲ್ಲಿ ಸ್ವಾಭಾವಿಕವಾದ ಮೂರು ಭಾಗಗಳಿವೆ. (ಪ್ರತಿಭಾಗವೂ ಸಹೋದರರೇ ಅಥವಾ ಸಮಾನ ಪದದಿಂದ ಪ್ರಾರಂಭವಾಗುತ್ತವೆ), ನಂತರ ಅವನು ಯೆಹೂದ್ಯ ಪದ್ಯವನ್ನು ನೆನಪು ಮಾಡಿರುವನು.

ಪೌಲನ "ಪ್ರೋತ್ಸಾಹದ ಮಾತುಗಳನ್ನು" ಗಮನಿಸೋಣ ಮತ್ತು ಅವನು ಅಂತಿಯೋಕ್ಯದವರಿಗೆ ನೀಡಿದ ಪ್ರೋತ್ಸಾಹದ ಮಾತುಗಳಲ್ಲಿ - ನಮ್ಮೆಲ್ಲರಿಗೆ ದೊರಕುವ ಪ್ರೋತ್ಸಾಹ ವೇನು.

## ದೇವರು ನಿಯಂತ್ರಣದಲ್ಲಿಡುವನು! (13:16-25)

ಪೌಲನು ಯೆಹೂದ್ಯ ಅಧಿಕಾರಿಗಳ, ಯೆಹೂದ್ಯರ ಮತ್ತು ದೇವರಿಗೆ ಭಯಪಡುವವರ ಮುಂದೆ ನಿಂತುಕೊಂಡನು[6] (ದೇವರಲ್ಲಿ ನಂಬಿಕೆಯಿಟ್ಟ ಅನ್ಯರು ಆದರೆ ಯೆಹೂದ್ಯರಾಗಿ ಪರಿವರ್ತನೆಗೊಳ್ಳದೆ ಇದ್ದವರು). ಅವನು ಕೈಸನ್ನೆ ಮಾಡಿ ಅವರನ್ನು ಆಕರ್ಷಿಸಿದನು (ನೋಡಿರಿ 21:40; 26:1) ಮತ್ತು "ಇಸ್ರಾಯೇಲ್ಯ ಜನರೇ, ಮತ್ತು ದೇವರಿಗೆ ಭಯಪಡುವವರೇ, ಕೇಳಿರಿ" ಎಂದು ಆರಂಭಿಸಿದನು (ವಚನ 16).

ಈ ದಿನಗಳಲ್ಲಿರುವ ಜನರಂತೆಯೇ ಆ ಕಾಲದಲ್ಲಿಯೂ ಸಹ ಇಂತಹ ವಿಶೇಷ ವಿಚಾರಗಳನ್ನು ಜನರು ತಿಳಿಯುವದರಲ್ಲಿ ಆನಂದಿಸುತ್ತಿದದ್ದರಿಂದ, ಪೌಲನು ಇಸ್ರಾಯೇಲ್ಯರೊಂದಿಗೆ ದೇವರು ಮಾಡಿಕೊಂಡ ಕಾರ್ಯದ ಬಗ್ಗೆ ವಿಮರ್ಶಿಸಿದನು:

> ಇಸ್ರಾಯೇಲ್ ಜನರೇ, ಮತ್ತು ಯೆಹೂದ್ಯ ಮತಾವಲಂಬಿಗಳೇ, ಕೇಳಿರಿ. ನಮ್ಮ ಇಸ್ರಾಯೇಲ್ ಜನರ ದೇವರು ನಮ್ಮ ಪಿತೃಗಳನ್ನು ಆರಸಿಕೊಂಡು ನಮ್ಮ ಜನರು ಐಗುಪ್ತ ದೇಶದಲ್ಲಿ ಪ್ರವಾಸವಾಗಿದ್ದಾಗ ಅವರನ್ನು ವೃದ್ಧಿಗೆ ತಂದು ಭುಜ ಬಲದಿಂದ[7] ಆ ದೇಶದೊಳಗಿಂದ ಬರಮಾಡಿದನು.[8] ಆತನು ಸುಮಾರು ನಾಲ್ವತ್ತು ವರುಷಗಳವರೆಗೂ[9] ಅಡವಿಯಲ್ಲಿ ಅವರ ನಡಾವಳಿಯನ್ನು ಸಹಿಸಿಕೊಂಡು[10] ಕಾನಾನ್ ದೇಶದಲ್ಲಿದ್ದ[11] ಅನ್ಯ ಜನಗಳ ಏಳು ರಾಜ್ಯಗಳನ್ನು ನಿರ್ಮೂಲಮಾಡಿ ಆ ಜನರ ದೇಶವನ್ನು ಅವರಿಗೆ ಬಾಧ್ಯವಾಗಿ ಹಂಚಿಕೊಟ್ಟನು.[12] ಇಷ್ಟರೊಳಗೆ ಸುಮಾರು ನಾನೂರೈವತ್ತು ವರುಷಗಳು ಗತಿಸಿದವು[13] (ವಚನಗಳು 17-19).

ಯೆಹೂದ್ಯ ಜನರ ಮುಂದೆ ಸ್ತೆಫನನು ಮಾಡಿದ ಪ್ರಸಂಗವು ನಮಗೆ ನೆನಪಾದರೂ, ಅದರಲ್ಲಿ ವ್ಯತ್ಯಾಸವಿತ್ತು; ಸ್ತೆಫನನು ವಿಮೋಚನೆ ನೀಡುವಂತ ದೇವರ ವ್ಯಕ್ತಿಗಳನ್ನು ಇಸ್ರಾಯೇಲ್ಯರು ಯಾವಾಗಲೂ ತಿರಸ್ಕರಿಸುತ್ತಿದ್ದರು. ಎಂಬುದಕ್ಕಾಗಿಯೇ ಸ್ತೆಫನನು ಇಸ್ರಾಯೇಲ್ಯರ ಚರಿತ್ರೆಯನ್ನು ವಿವರಿಸಿದ್ದನು; ಆದರೆ ಪೌಲನು ಇಸ್ರಾಯೇಲ್ಯರು ಮೆಸ್ಸೀಯನಿಗಾಗಿ ಸಿದ್ಧರಾಗಬೇಕೆಂದು ಇಸ್ರಾಯೇಲ್ಯರ ಚರಿತ್ರೆಯನ್ನು ವಿಶ್ಲೇಷಿಸಿದನು. ದೇವರು ಚರಿತ್ರೆಯಲ್ಲಿ ಕಾರ್ಯಮಾಡಿದನೆಂದು, ಮತ್ತು ಅದರ ಉದ್ದೇಶವನ್ನು ನೀಡುವನೆಂದು ಯೆಹೂದ್ಯರು ನಂಬಿದ್ದರು.

ಪೌಲನು ಶೀರ್ಘವಾಗಿ ಪುರಾತನ ಕಾಲದ ದಾವೀದನ ಚರಿತ್ರೆಯನ್ನು ಬಿಡಿಸಿಟ್ಟನು:

> ಇದಾದ ಮೇಲೆ ಪ್ರವಾದಿಯಾದ ಸಮುವೇಲನ ಕಾಲದವರೆಗೆ ನ್ಯಾಯಾಧಿಪತಿಗಳನ್ನು ಕೊಟ್ಟನು.[14] ತರುವಾಯ ಅವರು ತಮಗೆ ಅರಸನು ಬೇಕೆಂದು ಕೇಳಿಕೊಳ್ಳಲು ದೇವರು ಅವರಿಗೆ ಬೆನ್ಯಾಮೀನನ[15] ಕುಲದ ಕೀಷನ ಮಗನಾದ ಸೌಲನನ್ನು ಕೊಟ್ಟನು. ಅವನು ನಾಲ್ವತ್ತು ವರುಷ ಆಳಿದನು.[16] ಆ ಮೇಲೆ ದೇವರು ಅವನನ್ನು ತೆಗೆದು ಹಾಕಿ[17] ದಾವೀದನನ್ನು ಅವರ ಮೇಲೆ ಅರಸನನ್ನಾಗಿ ಮಾಡಿ - ಇಷಯನ ಮಗನಾದ ದಾವೀದನು ನನಗೆ ಸಿಕ್ಕಿದನು, ಅವನು ನನಗೆ ಒಪ್ಪುವ ಮನುಷ್ಯನು, ಅವನು ನನ್ನ ಇಷ್ಟವನ್ನೆಲ್ಲಾ ನೆರವೇರಿಸುವವನು ಎಂಬದಾಗಿ ಅವನ ವಿಷಯದಲ್ಲಿ ಸಾಕ್ಷಿಹೇಳಿದನು[18] (ವಚನಗಳು 20-22).

ದಾವೀದನ ವಂಶದಿಂದಲೇ ಮೆಸ್ಸೀಯನು ಬರುವನೆಂದು ಯೆಹೂದ್ಯರು ಅರಿತಿದ್ದರು.

ಇಲ್ಲಿಯವರೆಗೆ, ಪೌಲನ ಪ್ರಸಂಗವನ್ನು ಅವರು ಕೇಳುತ್ತಾ ಆನಂದಿಸಿದ್ದರು, ಆ ಪರಿಚಯವುಳ್ಳ ವಿಚಾರದ ಬಗ್ಗೆ ತಲೆತೂಗುತ್ತಿದ್ದರು. ಈಗ ಪೌಲನು ಅವರಿಗೆ ದಿಗ್ಭ್ರಮೆ ಉಂಟುಮಾಡಿದನು: "ಅವನ ಸಂತಾನದಿಂದ ದೇವರು ತನ್ನ ವಾಗ್ದಾನದ ಪ್ರಕಾರ,[19] ಇಸ್ರಾಯೇಲ್ಯರಿಗೆ ಒಬ್ಬ ರಕ್ಷಕನನ್ನು ಹುಟ್ಟಿಸಿದ್ದಾನೆ, ಆ ರಕ್ಷಕನೇ *ಯೇಸು*" (ವಚನ 23; ಒತ್ತಿ ಹೇಳಿದ್ದು ನನ್ನದು; ಮತ್ತಾಯ 1:1). ಆ ಕೇಳುಗರ ಮುಖದಲ್ಲಿ ಉಂಟಾದ ಬದಲಾವಣೆಯನ್ನು ನಾನು ಗಮನಿಸುತ್ತೇನೆ. ಪೌಲನ ಮಾತುಗಳಲ್ಲಿ ಎರಡು ಆಶ್ಚರ್ಯಗಳು ಇದ್ದವು. ಮೊದಲನೆಯದಾಗಿ ಈ ವ್ಯಾಖ್ಯಾನದಲ್ಲಿ ವರ್ತಮಾನ ಕಾಲವನ್ನು ತಿಳಿಸಿ, "ಇಸ್ರಾಯೇಲ್ಯರಿಗೆ ಒಬ್ಬ ರಕ್ಷಕನನ್ನು ಹುಟ್ಟಿಸಿದ್ದಾನೆ!" ಎರಡನೆ ಆಶ್ಚರ್ಯ ಆತನು ದಾವೀದನ ಸಂತಾನದವನು "ಇಸ್ರಾಯೇಲ್ಯರಿಗಾಗಿ, ದೇವರು, ರಕ್ಷಕನಾದ ಮೆಸ್ಸೀಯನನ್ನು ಕಳುಹಿಸಿದನು" ಎಂದು ಪೌಲನು ಹೇಳುತ್ತಿದ್ದನು ಎಂದು ನಿರೀಕ್ಷಿಸಿದ್ದರು, ಆದರೆ ಪೌಲನು "ದೇವರು ... ರಕ್ಷಕನಾದ *ಯೇಸುವನ್ನು*" ಹುಟ್ಟಿಸಿದನು ಎಂದು ಹೇಳಿದನು.

ಪೌಲನು ಅವರಲ್ಲಿ ಉಂಟಾದ ಗೊಂದಲ ಮತ್ತು ಮೌನವಾದ ಪ್ರಶ್ನೆಗಳನ್ನು ಅರಿತನು: "ಯೇಸು? ಈ ಯೇಸು ಯಾರು?" ಆ ಜನರು ಸ್ನಾನಿಕನಾದ[20] ಯೋಹಾನನ ಕಾರ್ಯವನ್ನು ಕುರಿತು ತಿಳಿದಿದ್ದರು ಎಂದು ಅಪೊಸ್ತಲನು ಅರಿತಿದ್ದನು (ಹೇಗೋ ಯೋಹಾನನ ಸೇವೆಯ ಸಮಯದಲ್ಲಿ ಅವರಲ್ಲಿ ಕೆಲವರು ಅಲ್ಲಿಗೆ ಪ್ರಯಾಣಿಸಿರಬಹುದು[21]). ಈಗ ಅವನು ಯೋಹಾನನ ಮಾತುಗಳನ್ನು ಉಪಯೋಗಿಸಿ, ಯೇಸು ಯಾರೆಂದು ತಿಳಿಸಿದನು (ಯೇಸುವೇ ಮೆಸ್ಸೀಯನೆಂದು ದೃಢೀಕರಿಸಿದನು):

> ಅವನ ಸಂತಾನದಿಂದ ದೇವರು ತನ್ನ ವಾಗ್ದಾನದ ಪ್ರಕಾರ ಇಸ್ರಾಯೇಲ್ಯರಿಗೆ ಒಬ್ಬ ರಕ್ಷಕನನ್ನು ಹುಟ್ಟಿಸಿದ್ದಾನೆ. ಆ ರಕ್ಷಕನೇ ಯೇಸು. ಆತನ ಆಗಮನಕ್ಕೆ ಮುಂಚೆ[22] ಯೋಹಾನನು ಇಸ್ರಾಯೇಲ್ ಜನರೆಲ್ಲರಿಗೆ - ನೀವು ದೇವರ ಕಡೆಗೆ ತಿರುಗಿಕೊಂಡು ಸ್ನಾನ ಮಾಡಿಸಿಕೊಳ್ಳಬೇಕೆಂದು ಸಾರಿದನು. ಯೋಹಾನನು ತನ್ನ ಸೇವೆಯನ್ನು ಪೂರೈಸುತ್ತಿರುವಾಗ ಜನರಿಗೆ[23] - ನನ್ನನ್ನು ಯಾರೆಂದು ಯೋಚಿಸುತ್ತೀರಿ? ನಾನು ಆತನಲ್ಲ, ಆದರೆ ನನ್ನ ಹಿಂದೆ ಒಬ್ಬನು ಬರುತ್ತಾನೆ, ಆತನ ಪಾದದ ಕೆರಗಳನ್ನು ಬಿಚ್ಚುವದಕ್ಕೆ ನಾನು ಯೋಗ್ಯನಲ್ಲ ಎಂದು ಹೇಳಿದನು[24] (ವಚನಗಳು 23ಬಿ-25).

"ಎಲೀಯನ ಆತ್ಮವನ್ನು ಪಡೆದವನಾಗಿ" ಯೋಹಾನನು ಬಂದನು, ಅವನು ಮೆಸ್ಸೀಯನಿಗಾಗಿ ಮಾರ್ಗವನ್ನು ಸಿದ್ಧಪಡಿಸಿದನು (ಮಾಲಾಕಿ 4:5, 6; ಲೂಕ 1:13-17; ಮತ್ತಾಯ 11:11-14; 17:10-13).[25] ಯೋಹಾನನ ಸಂದೇಶವನ್ನು ಕೇಳಿದವರು,ಯೇಸುವಿನ ಸಾಕ್ಷಿಯನ್ನು ಅವನ ಬಾಯಿಂದ ಕೇಳಿದ್ದರು: "ಅಗೋ (ಯಜ್ಞಕ್ಕೆ) ದೇವರು ನೇಮಿಸಿದ ಕುರಿ, ಲೋಕದ

ಪಾಪವನ್ನು ನಿವಾರಣೆ ಮಾಡುವವನು!" (ಯೋಹಾನ 1:29)! ಯೆಹೂದ್ಯರಲ್ಲಿ ಅನೇಕರು ಯೋಹಾನನನ್ನು ಪ್ರವಾದಿಯೆಂದು ನಂಬಿದ್ದರು (ಮತ್ತಾಯ 21:26); ಅದ ಕಾರಣ ಪೌಲನ ಕೇಳುಗರು ಈ ಮಾತುಗಳನ್ನು ಕೇಳದ್ದೇ ಆಗಿದ್ದರೆ, ಯೇಸುವೇ ವಾಗ್ದಾನದ ಮೆಸ್ಸೀಯನು ಎಂದು ದೃಢಿಕರಿಸಲು ಅವನ ಮಾತುಗಳೇ ಬುನಾದಿಯಾಗಿತ್ತು.

ಚರಿತ್ರೆಯು "ಇದ್ದಕ್ಕಿದ್ದ ಹಾಗೆ ಉಂಟಾಯಿತು" ಎಂದು ಇಸ್ರಾಯೇಲ್ಯರು ನಂಬಿರದೆ; ದೇವರು ಚರಿತ್ರೆಯಲ್ಲಿ ಕೆಲಸ ಮಾಡಿದ್ದನು ಎಂದು ನಂಬಿದ್ದರು. ಮತ್ತು *ದೇವರು* ಅವರ ಉದ್ದೇಶ ವನ್ನು ನಿರೂಪಿಸಿದ್ದನು ಎಂದೂ ನಂಬಿದ್ದರು. ಯೇಸುವನ್ನು ಲೋಕಕ್ಕೆ ಕಳುಹಿಸುವದು ದೇವರ ಉದ್ದೇಶವಾಗಿತ್ತು ಎಂಬ ಮುನ್ನುಡಿಯನ್ನು ಪೌಲನು ತನ್ನ ಪ್ರಸಂಗದಲ್ಲಿ ಈಗಾಗಲೇ ದೃಢೀಕರಿಸಿದ್ದನು.

ನಿಮ್ಮ ಬಗ್ಗೆ ನಾನು ಅರಿಯೆನು, ಆದರೆ ದೇವರು ಇತಿಹಾಸದಲ್ಲಿ ತನ್ನ ಕೈ ಚಳಕವನ್ನು ತೋರಿರುವನು ಎಂದು ಗ್ರಹಿಸುವದು ಉತ್ತೇಜನಕಾರಿಯಾಗಿದೆ. ಲೋಕವು ಆಗಾಗ್ಗೆ ತನ್ನ ಹತೋಟಿಯನ್ನು ಕಳಕೊಳ್ಳುತ್ತದೆ ಎಂದು ತಿಳಿಯುತ್ತೇವೆ.[26] ಕಳೆದ ಏಪ್ರೀಲ್ ತಿಂಗಳಿನಲ್ಲಿ, ಓಕ್ಲಾಹೋಮ್‌ಪಟ್ಟಣದ ಮುರ್ರ ಫೆಡರಲ್ ಕಟ್ಟಡವನ್ನು ಭಯೋತ್ಪಾದಕರು ಸುಟ್ಟು ಹಾಕಿದರು, ಅದರಲ್ಲಿ 169 ಜನರು ಮರಣ ಹೊಂದಿ 400 ಜನರು ಗಾಯಗೊಂಡರು. ಈ ಇದೇ ವರ್ಷ ನಾನಿರುವಂಥ ಸ್ಥಳದಲ್ಲಿ ಎರಡು ವಿಧವಾದ ದುರ್ಘಟನೆಗಳ ನಡೆದವು (ಬಲಾತ್ಕಾರ ಹಾಗೂ ಕೊಲೆ) ಅದನ್ನು ಸಭೆಯವರ ಮೇಲೆ ನಡೆಸಲಾಗಿತ್ತು. ಇಂಥಾ ದುರ್ಘಟನೆಗಳು ನಡೆಯುವಾಗ "ಏಕೆ?" ಎಂದು ಕೂಗುತ್ತೇವೆ, ಈ ವಿಧವಾದ ಘಟನೆಗಳನ್ನು ದೇವರು ಏಕೆ ಬರಮಾಡುತ್ತಾನೆ ಎಂದು ಆಶ್ಚರ್ಯಪಡುತ್ತೇವೆ. ಈ ಸಂಗತಿಗಳ ಕುರಿತು ಸಮಯೋಚಿತವಾದ ಉತ್ತರವು ದೊರಕುವದಿಲ್ಲ. ನಮ್ಮ ತಿಳುವಳಿಕೆಯು ಪರಿಮಿತಿಗೆ ಒಳಪಟ್ಟಿದ್ದರೂ, ದೇವರು ಇವೆಲ್ಲವುಗಳ ಮೇಲೆ ಹತೋಟಿ ಸಾಧಿಸಿರುವನು. "ಕ್ರೈಸ್ತರು ಇತಿಹಾಸದ ಕುರಿತು ಆಶೀರ್ವಾದಿಗಳಾ ಗಿರುವರು. ಇತಿಹಾಸವು ದೇವರ ಉದ್ದೇಶಕ್ಕನುಗುಣವಾಗಿ ಮುನ್ನುಗ್ಗುತ್ತಿದೆ."[27] ನಾವು ದೇವರಿಗೆ ನಂಬಿಗಸ್ತರಾಗಿದ್ದರೆ, ಅಘಾತಗಳನ್ನು ಜಯಿಸುತ್ತೇವೆ (ರೋಮಾಪುರ 8:28)!

## ಮೆಸ್ಸೀಯನು ಬಂದಿದ್ದಾನೆ (13:26-37)

ಸಭಾಮಂದಿರದಲ್ಲಿದ್ದವರನ್ನು, ಪೌಲನು, ಸಂಬೋಧಿಸಿ, "ಸಹೋದರರೇ, ಅಬ್ರಹಾಮನ ವಂಶಸ್ಥರೇ, ಮತ್ತು ಯೆಹೂದ್ಯ ಮತಾವಲಂಬಿಗಳೇ (ಅವನು ಅಲ್ಲಿರುವವರಿಗೆ ಕೈಸನ್ನೆ ಮಾಡಿರ ಬಹುದು), *ನಮಗೆ* ಈ ರಕ್ಷಣೆಯ ವಾಕ್ಯವು ಕಳುಹಿಸಿ ಅದೇ, ಅಂದನು" (ವಚನ 26; ಒತ್ತಿ ಹೇಳಿದ್ದು ನನ್ನದು). ಅವರೆಲ್ಲರನ್ನು ದೇವರು ತನ್ನ ಉದ್ದೇಶದಲ್ಲಿ ಸೇರಿಸಿರುವನು!

ಅವನ ಓದುಗರು "ರಕ್ಷಣೆಯ ಮಾತನ್ನು ಕೇಳುವ" ಮೊದಲು, ಪೌಲನು ಅನೇಕ ವಿಧವಾದ ಅಡ್ಡಿಗಳನ್ನು ಜಯಿಸಬೇಕಿತ್ತು. ಒಂದು ಕಾಲದಲ್ಲಿ ಅವನೂ ಸಹ, ಅವರಂತೆಯೇ ಇದ್ದನು, ಸಂದೇಹಾತ್ಮಕವಾಗಿದ್ದನು, ಹಾಗೂ ಪೂರ್ವಕಲ್ಪಿತ ಯೋಚನೆವುಳ್ಳವನಾಗಿದ್ದನು. ಮುಖ್ಯವಾಗಿ, "ಶಿಲುಬೆಗೆ ಆಕ್ಷೇಪ ವ್ಯಕ್ತಪಡಿಸುತ್ತಿದ್ದನು" (ಗಲಾತ್ಯ 5:11; ಹೋಲಿಸು 1 ಕೊರಿಂಥ 1:23). ಸ್ನಾನಿಕನಾದ ಯೋಹಾನನ ನೆನಪು ಅವರಿಗೆ ಉಂಟಾಗುವಾಗ, ಯೇಸು ಸಹ ಒಬ್ಬ ಸಾಮಾನ್ಯ ಅಪರಾಧಿಯಂತೆ ಶಿಲುಬೆಯಲ್ಲಿ ಕೊಲ್ಲಲ್ಪಟ್ಟನು ಎಂದು ನೆನಪಾಗುತ್ತಿತ್ತು. ಯೇಸು ಶಪಿತಸ್ಥನಾದದರಿಂದ,ಶಿಲುಬೆಗೆ ಹಾಕಲ್ಪಟ್ಟನು ಎಂದು, ಯೆಹೂದ್ಯರ ಮನಸ್ಸಿನಲ್ಲಿ ಅಚ್ಚಾಗಿ ಉಳಿದಿತ್ತು (ಧರ್ಮೋಪದೇಶ ಕಾಂಡ 21:23; ನೋಡಿರಿ ಗಲಾತ್ಯ 3:13) ಈ ಕಾರಣದಿಂದ ಆತನು ಮೆಸ್ಸೀಯನಾಗಲು ಅಸಾಧ್ಯವಾಗಿತ್ತು ಎಂದು ತಿಳಿದಿದ್ದರು. ಈ ವಿಷಯದ ಕುರಿತು, ಪೌಲನು:

> ಯೆರೂಸಲೇಮಿನಲ್ಲಿ ವಾಸವಾಗಿರುವವರೂ ಅವರ ಅಧಿಕಾರಿಗಳೂ ಆತನನ್ನಾಗಲಿ

ಪ್ರತಿ ಸಬ್ಬತ್‌ದಿನದಲ್ಲಿ ಪಾರಾಯಣವಾಗುವ ಪ್ರವಾದಿಗಳ ವಾಕ್ಯಗಳನ್ನಾಗಲಿ ಗ್ರಹಿಸದೆ ಆತನನ್ನು ಅಪರಾಧಿಯೆಂದು ತೀರ್ಪುಮಾಡಿ ಆ ವಾಕ್ಯಗಳನ್ನೇ ನೆರವೇರಿಸಿದರು. ಮರಣದಂಡನೆಗೆ ಕಾರಣವೇನೂ ತಮಗೆ ಸಿಕ್ಕದಿದ್ದರೂ ಆತನನ್ನು ಕೊಲ್ಲಿಸಬೇಕೆಂದು ಪಿಲಾತನನ್ನು ಕೇಳಿಕೊಂಡರು. ಆತನ ವಿಷಯವಾಗಿ ಶಾಸ್ತ್ರದಲ್ಲಿ ಬರೆದಿರುವದನ್ನೆಲ್ಲಾ[28] ನೆರವೇರಿಸಿದ ಮೇಲೆ ಆತನನ್ನು ಮರದ ಕಂಭದಿಂದ ಇಳಿಸಿ ಸಮಾಧಿಯಲ್ಲಿಟ್ಟರು[29] (ವಚನಗಳು 27-29).

ಈ ವಾಕ್ಯಗಳನ್ನು ಕೇಳುವ, ಅನುಯಾಯಿಗಳು, ಮತ್ತು ಪಂಚಾಶತ್ತಮ ದಿನದಲ್ಲಿ ಪೇತ್ರನು ಪ್ರಸಂಗಿಸಿದ ಪ್ರಸಂಗವನ್ನು ನೆನಪಿಸಿಕೊಂಡಂತಹ ನಮಗೂ, ಇರುವ ಮೂಲ ವ್ಯತ್ಯಾಸವೇನೆಂದರೆ: "ನೀವು ಶಿಲುಬೆಗೆ ಹಾಕಲ್ಪಟ್ಟ ಈ ಯೇಸು" ಎಂಬುದಾಗಿ ಯೆರೂಸಲೇಮಿನಲ್ಲಿ ಬೋಧಿಸಲ್ಪಟ್ಟ: *ಎರಡನೆಯ* ವ್ಯಕ್ತಿತ್ವವನ್ನು ಪ್ರಯೋಗಿಸಲಾಗಿದೆ (2:36; ಒತ್ತಿ ಹೇಳಿದ್ದು ನನ್ನದು). ಈಗ ಯೆರೂಸಲೇಮಿನಿಂದ ದೂರವಿದ್ದು: "ಆತನನ್ನು ಕೊಲ್ಲಿಸಬೇಕೆಂದು ಪಿಲಾತನನ್ನು ಕೇಳಿಕೊಂಡರು" ಎಂಬ *ಮೂರನೇ* ವ್ಯಕ್ತಿತ್ವವನ್ನು ಪ್ರಯೋಗಿಸಲಾಗಿದೆ. (ಒತ್ತಿ ಹೇಳಿದ್ದು ನನ್ನದು.)

ಯೇಸು ಸ್ವಾಮೀಯೇ ಮೆಸ್ಸೀಯನು ಎಂಬುದಕ್ಕೆ ಪೌಲನು ಮೂಲತಃ ಎರಡು ಕಾರಣಗಳನ್ನು ನೀಡಿರುವನು: ಮೊದಲನೆಯದಾಗಿ, "ಯೇಸು ಸಾಯತಕ್ಕವನಾಗಿರಲಿಲ್ಲ, ಮರಣಕ್ಕೆ ಯೋಗ್ಯವಾದ ಯಾವುದೇ ಅಪರಾಧವು ಆತನಲ್ಲಿ ಕಂಡು ಬಾರದೆ ಇದ್ದಾಗ್ಯೂ, ಆತನನ್ನು ಮರಣಕ್ಕೆ ಒಪ್ಪಿಸಬೇಕೆಂದು ಪಿಲಾತನನ್ನು ಕೇಳಿಕೊಂಡರು." ಮಂಡಳಿಯು, ಆತನು ದೇವದ್ರೋಹಿ ಎಂದು ನಿರ್ಣಯಿಸಿದ್ದಾಗ್ಯೂ ಆತನು ದೇವರ ಮಗನಾಗಿದ್ದರಿಂದ, ಇದು ದೇವ ದ್ರೋಹದ ಹೇಳಿಕೆಯಾಗಿರುವದಿಲ್ಲ. ಪಿಲಾತನು ಆತನನ್ನು ಪರೀಕ್ಷಿಸಲಾಗಿ, ಆತನನ್ನು ನಿರ್ದೋಷಿಯೆಂದು ಪ್ರಕಟಿಸಿದನು. ಯೇಸು ಅಪರಾಧಿಯಾಗಿ ಸಾಯದೆ, ಯೆಹೂದ್ಯರ ಬಯಕೆಯಂತೆ ಮರಣಕ್ಕೆ ಒಳಗಾದನು!

ಯೇಸು ಸ್ವಾಮಿಯೇ ಮೆಸ್ಸೀಯನು ಎಂಬುದಕ್ಕೆ, ಪೌಲನು ಪ್ರಾಥಮಿಕವಾದ ಎರಡನೆಯ ಕಾರಣವನ್ನು ನೀಡಿ; ಆತನ ಮರಣವು ಗ್ರಂಥಗಳಿಗೆ ಅನುಗುಣವಾಗಿತ್ತು. ಪೌಲನು ಇದನ್ನು ಕುರಿತು, "ಯೆರೂಸಲೇಮಿನಲ್ಲಿ ವಾಸವಾಗಿರುವವರೂ ಅವರ ಅಧಿಕಾರಿಗಳಿಗೂ ಆತನನ್ನಾಗಲೀ ಪ್ರತಿ ಸಬ್ಬತ್ ದಿನದಲ್ಲಿ ಪಾರಾಯಣವಾಗುವ ಪ್ರವಾದಿಗಳ ವಾಕ್ಯಗಳನ್ನಾಗಲೀ ಗ್ರಹಿಸದೆ ಆತನನ್ನು ಅಪರಾಧಿಯೆಂದು ತೀರ್ಪುಮಾಡಿ ಈ ವಾಕ್ಯಗಳನ್ನೇ ನೆರವೇರಿಸಿದರು." ಪೌಲನು ಕೆಲ ಕ್ಷಣಗಳ ಕಾಲ, ಆತನ ಮರಣದ ಹಿಂಸೆಯ ಕುರಿತ ಪ್ರವಾದನೆಗಳನ್ನು ತಿಳಿಸಿದನು - ಯೆಶಾಯ 53, ಮತ್ತು ಕೀರ್ತನೆಗಳು 22.[30] ಯೇಸುವನ್ನು *ಅನರ್ಹಗೊಳಿಸುವ* ಬದಲು, ಆತನ ಕ್ರೂಜೆಯ ಮರಣವು, ಆತನನ್ನು ಮೆಸ್ಸೀಯನು ಎಂಬುದಾಗಿ *ಸಾಭೀತು* ಪಡಿಸಿತು ಎಂದು ಪೌಲನು ಸಿದ್ಧಾಂತ ಪಡಿಸಿದನು.

ಅವರ ಸಾಧಾರಣವಾದ ವಾದಕ್ಕೆ ಪೌಲನು ಉತ್ತರವನ್ನು ನೀಡಿ, ಯೇಸು ಕ್ರಿಸ್ತನೇ ಮೆಸ್ಸೀಯನು ಎಂದು ಹೇಳುತ್ತಾ ಮುಂದುವರಿದನು. ಯೇಸುವಿನ ಮರಣವನ್ನು ಅಪೇಕ್ಷಿಸಿದ ಯೆಹೂದ್ಯರಿಗೆ, ದೇವರ ಉತ್ತರವನ್ನು ನೀಡಿ, "ದೇವರು, ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು" (ವಚನ 30) ಎಂದು ಹೇಳಿದನು. ಯೇಸುವಿನ ಪುನರುತ್ಥಾನದ ಸಂದೇಶವನ್ನು ಕೇಳಿದವರೆಲ್ಲರ ತಲೆಗಳು ನೇರವಾಗಿರಬಹುದು!

ಆತನ ಪುನರುತ್ಥಾನದ ನಂತರ ಅವನನ್ನು ಕಣ್ಣಾರೆ ನೋಡಿದವರ ಸಾಕ್ಷಿಗಳೇ ಪೌಲನ ಆಧಾರವಾಗಿತ್ತು: "ಆತನು ಗಲಿಲಾಯದಿಂದ ಯೆರೂಸಲೇಮಿಗೆ ತನ್ನ ಜೊತೆಯಲ್ಲಿ ಬಂದವರಿಗೆ ಅನೇಕ ದಿವಸಗಳ[31] ಪರಿಯಾಂತರ ಕಾಣಿಸಿಕೊಂಡನು, ಅವರು ಈಗ ಜನರ ಮುಂದೆ ಆತನಿಗೆ ಸಾಕ್ಷಿಗಳಾಗಿದ್ದಾರೆ" (ವಚನ 31). 1 ಕೊರಿಂಥ 15ರಲ್ಲಿರುವ ಪುನರುತ್ಥಾನದ

ಸಾಕ್ಷಿಯನ್ನು ಪೌಲನು ಇಲ್ಲಿ ತಿಳಿಸಿರಬಹುದು, "ಕಟ್ಟ ಕಡೆಗೆ, ನನಗೂ ಕಾಣಿಸಿಕೊಂಡನು" ಎಂಬ ಮಾತುಗಳಿಂದ ಅಂತ್ಯಗೊಳಿಸಿರಬಹುದು (1 ಕೊರಿಂಥ 15:8).

ಆತನ ಮರಣ ಹಾಗೂ ಹೂಣಿಡುವಿಕೆಯಂತೆ, ಆತನ ಪುನರುತ್ಥಾನವು ಸಹ ಪ್ರವಾದನೆಗೆ ಅನುಗುಣವಾಗಿತ್ತು ಎಂದು ತಿಳಿಸಿದನು:

> ಅನೇಕ ದಿವಸಗಳ ಪರಿಯಂತರ ಕಾಣಿಸಿಕೊಂಡನು. ಅವರು ಈಗ ಜನರ ಮುಂದೆ ಆತನಿಗೆ ಸಾಕ್ಷಿಗಳಾಗಿದ್ದಾರೆ.[32] ದೇವರು ನಮ್ಮ ಪಿತೃಗಳಿಗೆ ಮಾಡಿದ ವಾಗ್ದಾನವನ್ನು ನಮ್ಮ ಮಕ್ಕಳಿಗೋಸ್ಕರ ನೆರವೇರಿಸಿದ್ದಾನೆಂಬ ಶುಭ ಸಮಾಚಾರವನ್ನು ನಾವು ನಿಮಗೆ ಸಾರುವವರಾಗಿದ್ದೇವೆ.[33] ಆತನು ಯೇಸುವನ್ನು ಎಬ್ಬಿಸಿದ್ದರಲ್ಲಿ - ನನಗೆ ನೀನು ಮಗನು, ನಾನೇ ಈ ಹೊತ್ತು ನಿನ್ನನ್ನು ಪಡೆದಿ ದ್ದೇನೆ ಎಂದು ಎರಡನೆಯ ಕೀರ್ತನೆಯಲ್ಲಿ ಬರೆದಿ ರುವ ಮಾತು ನೆರವೇರಿತು (ವಚನಗಳು 32, 33; ನೋಡಿರಿ ಕೀರ್ತನೆಗಳು 2:7).

ಕೀರ್ತನೆ 2 ಘನವಾದದ್ದಾಗಿದೆ ಹೊಸ ಅರಸನಿಗೆ ಕಿರೀಟಧಾರಣೆ ಮಾಡುವಾಗ, ಇಸ್ರಾಯೇಲ್ಯರು ಬಳಸುತ್ತಿದ್ದ ಕೀರ್ತನೆ. "ನನಗೆ ನೀನು ಮಗನು" ಎಂಬುದು, ಆತನ ಜನನದ ಕುರಿತು ತಿಳಿಸದೆ, "ಅತನು ವಿಶೇಷವಾದ ಮಗನು" ಎಂಬುದನ್ನು ತಿಳಿಸುತ್ತದೆ. ಕೀರ್ತನೆ 2ನ್ನು ಯೆಹೂದ್ಯರು, ಮೆಸ್ಸೀಯನ ಕೀರ್ತನೆ ಎಂದು ತಿಳಿದಿದ್ದರು, ಅದರಲ್ಲಿ ಒಂದು ಭಾಗ ಲೌಕಿಕ ಅರಸನ ಕುರಿತಾಗಿ ಇದ್ದರೂ, ಮೆಸ್ಸೀಯನ ವಿಷಯದಲ್ಲಿ ಪೂರ್ಣವಾಗಿ ನೆರವೇರಿರುತ್ತದೆ. ಯೇಸುವಿನ ಹಿಂಸೆಯ ಕುರಿತಾದ ಹಾಗೂ ಆತನ ಪಟ್ಟಾಭಿಷೇಕದ ಕುರಿತಾದ ವಾಗ್ದಾನವನ್ನು ಪೌಲನು ತಿಳಿಸುತ್ತಾ: ಮೆಸ್ಸೀಯನು ಮರಣ ಹೊಂದಿದ ನಂತರ, *ಪುನರುತ್ಥಾನವಾಗುವಾಗ* ಕೀರಿಟವನ್ನು ಗೌರವವನ್ನು ಹೊಂದಿದನೆಂದು ತಿಳಿಸಿರುವನು. ರೋಮಾಪುರ 1:4ರಲ್ಲಿ, 2ನೇ ಕೀರ್ತನೆಯ ಉತ್ತಮವಾದ ವಿಶ್ಲೇಷಣೆಯನ್ನು ಪೌಲನು ನೀಡಿ: "ಸತ್ತ ಮೇಲೆ ಜೀವಿತವಾಗಿ ಎದ್ದು ಬಂದ ಮಹತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನು ಆಗಿದ್ದಾನೆ."

ಮುಂದೆ ಪೌಲನು ಯೆಶಾಯ 55:3ರ ವಿವರಣೆಯನ್ನು ನೀಡಿ: "ಇದಲ್ಲದೆ ದೇವರು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ್ದರಿಂದ ಆತನು ಇನ್ನೆಂದಿಗೂ ಕೊಳೆಯುವ ಅವಸ್ಥೆಗೆ ಸೇರತಕ್ಕವನಲ್ಲ ಎಂಬುದರ ವಿಷಯಲ್ಲಿ ದೇವರು ಹೇಳಿರುವದೇನೆಂದರೆ - ದಾವೀದನಿಗೆ ಖಂಡಿತವಾಗಿ ವಾಗ್ದಾನ ಮಾಡಿದ ಕೃಪಾವರಗಳನ್ನು ನಿಮಗೆ ಕೊಡುತ್ತೇನೆ" (ವಚನ 34). "ದಾವೀದನ ಕೃಪಾವರಗಳು" ಎಂಬುದು ದೇವರು ಮೆಸ್ಸೀಯನನ್ನು ದಾವೀದನ ಸಿಂಹಾಸನದಲ್ಲಿ ಕೂಡ್ರಿಸುವನೆಂಬ ವಾಗ್ದಾನದ ಮುಖ್ಯಾಂಶವನ್ನು ತಿಳಿಸುತ್ತದೆ; ಈ ಕಾರ್ಯಕ್ಕೆ ಪುನರುತ್ಥಾನವು ಅತಿ ಅಗತ್ಯವಾಗಿತ್ತು. ಇದು ಪೌಲನ ವಾದವಾಗಿತ್ತು.

ಪೌಲನು ಇದೇ ವಾಕ್ಯವನ್ನು ಹೇಳಿ ತನ್ನ ತರ್ಕವನ್ನು ಅಂತ್ಯಗೊಳಿಸಿದನು (ಕೀರ್ತನೆ 16:10) ಮತ್ತು ಪಂಚಾಶತ್ತಮ ದಿನದಂದು, ಪೇತ್ರನು ಸಹ ಇದೇ ತರ್ಕವನ್ನು ಮಾಡಿರುವನು:

> ಅದಕ್ಕನುಸಾರವಾಗಿ ಆತನು - ನೀನು ನಿನ್ನ ಪ್ರಿಯನಿಗೆ ಕೊಳೆಯುವ ಅವಸ್ಥೆಯನ್ನು ನೋಡಗೊಡಿಸುವದಿಲ್ಲವೆಂದು ಬೇರೊಂದು ಕೀರ್ತನೆಯಲ್ಲಿ ಹೇಳಿದ್ದಾನೆ. ದಾವೀ ದನಾದರೋ ತನ್ನ ಸಕಾಲದವರಿಗೆ ಸೇವೆ ಮಾಡಿದ ನಂತರ ದೈವ ಸಂಕಲ್ಪದಿಂದ ನಿದ್ದೆಹೋಗಿ ತನ್ನ ಪಿತೃಗಳ ಬಳಿಯಲ್ಲಿ ಇಡಲ್ಪಟ್ಟು ಕೊಳೆಯುವ ಅವಸ್ಥೆಯನ್ನು ಅನುಭವಿಸಿದನು. ಆದರೆ ದೇವರು ಎಬ್ಬಿಸಿದಾತನು ಕೊಳೆಯುವ ಅವಸ್ಥೆಯನ್ನು ಅನುಭವಿಸಿಲ್ಲ (ವಚನಗಳು 35-37).

"ಕೊಳೆಯುವ ಅವಸ್ಥೆಯನ್ನು, ನೀನು ನಿನ್ನ ಪ್ರಿಯನಿಗೆ ನೋಡಗೂಡಿಸುವದಿಲ್ಲ." ಎಂಬ ವ್ಯಾಖ್ಯಾನವನ್ನು ದಾವೀದನು ತನ್ನ ಕುರಿತಾಗಿ ಹೇಳಿ ಕೊಳ್ಳದೆ, ಈಗಾಗಲೇ ಅವನು

ಕೊಳೆಯುವ ಅವಸ್ಥೆಯನ್ನು ಅನುಭವಿಸಿರುವದರಿಂದ, *ಮೆಸ್ಸೀಯನು* ತನ್ನ ಮರಣದ ನಂತರ, ಅವನ ದೇಹವು ಕೊಳೆಯುವ ಅವಸ್ಥೆಗೆ ಹೋಗುವದಿಲ್ಲವೆಂಬ ಪ್ರವಾದನೆಯು ಇದಾಗಿರುತ್ತದೆ - ಅದು ಪುನರುತ್ಥಾನದ ಮೂಲಕ ಎದ್ದು ಬಂದದ್ದಾಗಿತ್ತು.[35]

ಇದರ ನಿಮಿತ್ತ ಪೌಲನು ತಾನು ಹೇಳುತ್ತಿದ ಅಂಶವನ್ನು ಸ್ಪಷ್ಟಪಡಿಸಿ ಮೆಸ್ಸೀಯನು ಮರಣದಿಂದ ಎದ್ದು ಬಂದು, ಮಹಿಮೆ ಹೊಂದಿದ್ದರಿಂದ, ಮತ್ತು ಈ ಅನುಭವವು ಯೇಸುವಿಗೆ ಮಾತ್ರ ಉಂಟಾದದ್ದರಿಂದ, ಯೇಸು ಮಾತ್ರ ಮೆಸ್ಸೀಯನು ಎಂದು ದೃಢಪಡಿಸಿದನು!

ಇದಕ್ಕಿಂತಲೂ, ಹೆಚ್ಚಿನ ಪ್ರೋತ್ಸಾಹದ ನುಡಿಗಳು ನನ್ನಲ್ಲಿರುವದಿಲ್ಲ: ಮುಂಜಾನೆಯ ಬೆಳಕು ಕತ್ತಲನ್ನು ಓಡಿಸುವಂತೆ, ಮೆಸ್ಸೀಯನು ಇಳಿದು ಬಂದನು! ಯೇಸು ಕ್ರಿಸ್ತನೇ ದೇವರ ಮಗನು, ಲೋಕದ ರಕ್ಷಕನು ಎಂಬ ಗ್ರಹಿಕೆಯು, ನಮ್ಮ ಹೃದಯದಲ್ಲಿರುವ ಕತ್ತಲೆಯನ್ನು ಹೊರಹಾಕುತ್ತದೆ. ಕೆಟ್ಟ ಸುದ್ದಿಯು, ಮುಖ್ಯಾಂಶವಾದರೆ, ಶುಭಸಮಾಚಾರವು ನಮ್ಮ ಹೃದಯವನ್ನು ತುಂಬಿಸುತ್ತದೆ!

## ನೀವು ರಕ್ಷಿಸಲ್ಪಡಬಹುದು! (13:38-41)

ಪೌಲನು ತನ್ನ ಕೇಳುಗರಿಗೆ ಸ್ಪಷ್ಟೀಕರಣ ನೀಡಲು ಸಿದ್ಧನಾಗಿದ್ದನು:

> ಆದದರಿಂದ ಸಹೋದರರರೇ, ಆತನ ಮೂಲಕವಾಗಿ ಪಾಪಪರಿಹಾರವು ದೊರೆಯುತ್ತದೆಂಬದು ನಿಮಗೆ ಸಾರೋಣವಾಗುತ್ತದೆಂದು ನಿಮಗೆ ತಿಳಿದಿರಲಿ.[36] ಮೋಶೆಯ ಧರ್ಮಶಾಸ್ತ್ರದ ಮೂಲಕ[37] ನೀವು ಬಿಡುಗಡೆ ಹೊಂದಲಾಗದ ಎಲ್ಲಾ ಪಾಪಗಳಿಂದ ನಂಬುವವರೆಲ್ಲರು[38] ಆತನ ಮೂಲಕವಾಗಿ ಬಿಡುಗಡೆ ಹೊಂದಿ ನೀತಿವಂತರೆನ್ನಿಸಿಕೊಳ್ಳುತ್ತಾರೆ[39] (ವಚನಗಳು 38, 39).

"ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯ." ಎಂಬ ಅಂಶವನ್ನು ಯಥಾರ್ಥವಾದಂತಹ ಯೆಹೂದ್ಯನು ಖಂಡಿತವಾಗಿ ಒಪ್ಪಿಕೊಳ್ಳುವನು (ಇಬ್ರಿಯ 10:4) - ಆದ್ದರಿಂದ ಯೆರೆಮೀಯಾನು ಸಹ ಬರೆದು, "*ಇಗೋ* ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ್ಯ ವಂಶದವರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು" ಎಂದು ಹೇಳಿರುವನು (ಯೆರೆಮೀಯ 31:31; ಒತ್ತಿ ಹೇಳಿದ್ದು ನನ್ನದು). ಪಾಪವು ಕ್ಷಮಿಸಲ್ಪಡುವದು ಎಂಬುದು, ಹೊಸ ಒಡಂಬಡಿಕೆ ಸದ್ಗುಣವಾ ಗಿದೆ. (ಕ್ರಿಸ್ತನ ಒಡಂಬಡಿಕೆ), ಪಾಪವನ್ನು ಅವರ ಲೆಕ್ಕಕ್ಕೆ ಪರಿಗಣಿಸುವದಿಲ್ಲ: "ಚಿಕ್ಕವರು ಮೊದಲುಗೊಂಡು ದೊಡ್ಡವರತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು; ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ ಇದು ಯೆಹೋವನ ನುಡಿ" (ಯೆರೆಮೀಯ 31:34ಬಿ).

ಈಗ, ಮನುಷ್ಯರಿಗೆ *ವಿಮೋಚನೆ*ಯುಂಟಾಯಿತು. ಹಳೇ ಒಡಂಬಡಿಕೆಯ ವಿಧಿಗಳಿಂದ ಮಾತ್ರವಲ್ಲದೆ; ಪಾಪದಿಂದಲೂ ವಿಮೋಚನೆಯುಂಟಾಯಿತು, ಪಾಪಪ್ರಜ್ಞೆಯಿಂದಲೂ ದೇವರು ವಿಧಿಸಿದ ನಿಯಮಗಳಿಂದಲೂ! ನಿಮ್ಮ ಮನಸ್ಸಾಕ್ಷಿಯು ನಿಮ್ಮನ್ನು ಕರುಣೆಯಿಲ್ಲದೆ ಹಿನ್ನೆಸುವಾಗಲೂ ಪಾಪದ ನಿಮಿತ್ತ ವಿಶ್ರಾಂತಿಯನ್ನು ಕಳಕೊಂಡವರಾದ ನಿಮಗೂ, ಇದು ಆಶ್ಚರ್ಯಕರವಾದ ಸಮಾಚಾರವಲ್ಲವೋ!

ಪೌಲನ ಕೇಳುಗರಿಗೆ ಇದು ಶುಭ ಸಂದೇಶವಾಗಿತ್ತು, ಆದರೆ ಒಂದು ವೇಳೆ ದೇವರ ಈ ಅಪರಿಮಿತವಾದ ವಿಮೋಚನೆಯನ್ನು ಅಲಕ್ಷಮಾಡುವದಾದರೇ ಅವರಿಗೆ ಕೆಟ್ಟ ಸುದ್ದಿಯು ಸಹ ಕಾಯುತ್ತಿತ್ತು. ಪೌಲನು ತನ್ನ "ಪ್ರೋತ್ಸಾಹದ ಸಂದೇಶವನ್ನು" ಅಂತ್ಯಗೊಳಿಸುವಾಗ ಅವನ ಮುಖದಲ್ಲಿ ದುಃಖದ ಛಾಯೆಯು ಮೂಡಿತು: "ಹೀಗಿರಲಾಗಿ ಪ್ರವಾದಿಗಳ ಗ್ರಂಥದಲ್ಲಿ ಹೇಳಿರುವದು ನಿಮಗೆ ಸಂಭವಿಸದಂತೆ ನೋಡಿಕೊಳ್ಳಿರಿ" (ವಚನ 40).[40] ಪೌಲನು

ಮಾತನಾಡುವದಕ್ಕಿಂತ ಮೊದಲು, ಅಲ್ಲಿ ಪ್ರವಾದನಗಳ ಪಾರಾಯಣವಾಗಿತ್ತು. ದೇವರನ್ನು ಹಾಗೂ ಆತನ *ಮಾರ್ಗವನ್ನು* ತಿರಸ್ಕಾರ ಮಾಡುವವರಿಗೆ ದೇವರ ಶಾಪವು ಉಂಟಾಗುತ್ತದೆಂದು ಪ್ರವಾದನೆಗಳ ಎಚ್ಚರಿಕೆಯನ್ನು ಪೌಲನ ಕೇಳುಗರು ಅರಿತುಕೊಂಡಿದ್ದರು.

ಪೌಲನು ಹಬಕ್ಕೂಕನ ಗ್ರಂಥದಲ್ಲಿ ಹೇಳಿರುವದನ್ನು ಎದುರಿಸುತ್ತಿರುವನು:[41] "ಎಲೈ ತಿರಸ್ಕಾರ ಮಾಡುವವರೇ, ಆಶ್ಚರ್ಯಪಡಿರಿ, ನಾಶವಾಗಿ ಹೋಗಿರಿ, ನಿಮ್ಮ ಕಾಲದಲ್ಲಿ ನಾನು ಒಂದು ಕಾರ್ಯವನ್ನು ಮಾಡುವೆನು; ಆ ಕಾರ್ಯವನ್ನು ಒಬ್ಬನು ನಿಮಗೆ ವಿವರಿಸಿದರೂ ನೀವು ಅದನ್ನು ಎಷ್ಟು ಮಾತ್ರಕ್ಕೂ ನಂಬುವದಿಲ್ಲ ಎಂದು ಹೇಳಿದನು" (ವಚನ 41; ನೋಡಿರಿ ಹಬಕ್ಕೂಕ 1:5). ಹಬಕ್ಕೂಕನ ದಿವಸಗಳಲ್ಲಿ, ಅನ್ಯ ಜನಾಂಗದ ಮೂಲಕ (ಬಾಬಿಲೋನ) ತನ್ನ ಜನರನ್ನು ಶಿಕ್ಷಿಸುವದು ದೇವರ ಅತಿಶಯೋಕ್ತಿಯ "ಕೆಲಸವಾಗಿತು" ಇಸ್ರಾಯೇಲ್ಯರು ಇದನ್ನು ಅಸಾಧ್ಯ ಎಂದು ತಿಳಿದಿದ್ದರು. ಬಾಬಿಲೋನಿನವರು ಅವರನ್ನು ಅತಿಕ್ರಮಿಸಿ ಅವರಲ್ಲಿ ಏನೇಕರನ್ನು ನಾಶಪಡಿಸಿದ್ದರು. ಹಬಕ್ಕೂಕನ ದಿವಸಗಳಲ್ಲಿ ದೇವರ ಅತಿಶಯೋಕ್ತಿಯಾದ ಕೆಲಸವು ಆತನ ಜನರಿಗೆ ಶಾಪವಾಗಿತ್ತು; ಪೌಲನ ದಿವಸಗಳಲ್ಲಿ, ದೇವರ ಅತಿಶಯೋಕ್ತಿ ಯಾದ ಕೆಲಸವು - ಮೆಸ್ಸೀಯನನ್ನು ಕಳುಹಿಸುವುದರ ಮೂಲಕವಾಗಿ ಆಶೀರ್ವಾದವಾಗಿತ್ತು. ಹೇಗೂ ಅದರ ಪರಿಣಾಮಗಳು ಮಾತ್ರ ಒಂದೇಯಾಗಿದ್ದವು: ದೇವರ ಸಂದೇಶವನ್ನು (ಪೌಲ) "ನಿಕರಾಕರಿಸಿದವರು" ಸಹ ನಾಶವಾಗುತ್ತಿದ್ದರು!

ಪೌಲನು ತನ್ನ "ಪ್ರೋತ್ಸಾಹದ ಸಂದೇಶವನ್ನು" ಅಂತ್ಯಗೊಳಿಸುವಾಗ ಯೇಸುವೇ ಮೆಸ್ಸೀಯನು ಎಂದು ನಂಬುವದು ಅಗತ್ಯವೆಂದು ಒತ್ತಿ ಹೇಳಿದನೇ ವಿನಃ, ಮಾನಸಾಂತರ ಅಥವಾ ಯೇಸುವನ್ನೆ ಅರಿಕೆ ಮಾಡಬೇಕು ಮತ್ತು ದೀಕ್ಷಾಸ್ನಾನ ಮಾಡಿಸಿಕೊಳ್ಳ ಬೇಕು ಎಂಬ ಅಪ್ಪಣೆಯ ಪ್ರಾಮುಖ್ಯತೆಯನ್ನು ತಿಳಿಸಲಿಲ್ಲ.[42] ಈ ಪ್ರಾಥಮಿಕ ಪೂರ್ವ ಸಿದ್ಧತೆಯ ಸಂದೇಶದಲ್ಲಿ, ಅವರ ಯೋಚನೆಗಳಲ್ಲಿ ಆಸಕ್ತಿ ಉಂಟು ಮಾಡಲು ಯತ್ನಿಸಿದನು, ಅವರು ನಂಬಿಕೆಯ ಹಾದಿಗೆ ಬರಬೇಕೆಂತಲೂ ಪ್ರಯತ್ನಿಸಿದನು. ಒಂದು ವೇಳೆ ಪೌಲನು ತನ್ನ ಗುರಿಯನ್ನು ಸಾಧಿಸಿದ್ದಾದರೆ, ಆಸಕ್ತಿಯುಳ್ಳ ತನ್ನ ಕೇಳುಗರಲ್ಲಿ ಈ ನಂಬಿಕೆಯ ಬುನಾದಿಯ ಮೇಲೆ ಕಟ್ಟಲು ಮುಂದುವರೆಯುವವನಾಗಿದ್ದನು!

## ಮುಕ್ತಾಯ

ಈ ಉತ್ತೇಜನಕಾರಿಯಾದ ಸತ್ಯಕ್ಕಿಂತಲೂ ಹೆಚ್ಚಾದದ್ದನ್ನು ನಾವು ಊಹಿಸಬಹುದೇ? ಜೀವಿತದ ಕುರಿತು ಆಸಕ್ತಿವುಳ್ಳವರಿಗೆ, ನಾವು ಪ್ರಕಟಿಸುವದೇನೆಂದರೆ, "ದೇವರು ಎಲ್ಲವನ್ನು ಹತೋಟಿಯಲ್ಲಿಡುವನು" ಅನಿಶ್ಚಯವುಳ್ಳವರಿಗೆ, ನಾವು ಹೇಳುವದೇನೆಂದರೆ, "ಮೆಸ್ಸೀಯನು ಬಂದಿರುವನು!" ಪಾಪದಲ್ಲಿರುವವರಿಗೆ, "ನೀವು ರಕ್ಷಿಸಲ್ಪಡಬಹುದು!" ಎಂದು ತಿಳಿಸುತ್ತೇವೆ.

ಪೌಲನ ಪ್ರಸಂಗವನ್ನು ಗಮನಿಸುವಾಗ, ಅವನ ಈ ಉತ್ತೇಜನಕಾರಿಯಾದ ಸತ್ಯಗಳಿಗೆ ಯೇಸುವೇ ಮುಖ್ಯ ಕೇಂದ್ರವಾಗಿರುವನು. ಪೌಲನ ಮೊದಲನೆಯ ಪಾಠವನ್ನು ಲಿಕ್‌ಆ್ಯಚಲಿಯವರು "*ಯೇಸುವೇ,* ಇತಿಹಾಸದ ಮುಖ್ಯ ಕೇಂದ್ರ" ಎಂಬುದಾಗಿಯೂ; ಎರಡನೆಯ ಭಾಗವನ್ನು "ಯೇಸುವೇ ಪ್ರವಾದನೆಯ ನೆರವೇರಿಕೆ; ಮತ್ತು ಮೂರನೆಯ ಭಾಗವನ್ನು, ಯೇಸುವೇ, ಪಾಪಗಳನ್ನು ಕ್ಷಮಿಸುವವನು."[43] ಎಂದು ಕರೆದಿರುವರು. ನಂತರ ಪೌಲನು "ಕ್ರಿಸ್ತನಲ್ಲಿ" ಉಂಟಾಗುವ "ಉತ್ತೇಜನದ" ಕುರಿತು ಬರೆದಿರುವನು (ಫಿಲಿಪ್ಪಿ 2:1). ನಿಮಗೆ ಉತ್ತೇಜನದ ಅಗತ್ಯತೆಯಿದ್ದರೆ, ಯೇಸುವಿನೊಂದಿಗೆ ಸಂಬಂಧವನ್ನು ಹೊಂದಿಕೊಳ್ಳಿರಿ!

ನಮ್ಮ ಮುಂದಿನ ಪಾಠದಲ್ಲಿ ಪೌಲನ ಕೇಳುಗರ ಪ್ರತಿ ಕ್ರಿಯೆಯ ಕುರಿತು ನೋಡುತ್ತೇವೆ. ಹೇಗೂ ಈ ಕ್ಷಣದಲ್ಲಿ ನಿಮ್ಮ ಪ್ರತಿ ಕ್ರಿಯೆಯ ಬಗ್ಗೆ ನಾನು ಕೇಳುತ್ತೇನೆ. ಯೇಸುವನ್ನು

ಕರ್ತನೆಂದು ಒಪ್ಪಿಕೊಳ್ಳುವ ಮನಸ್ಸಿದ್ದರೆ *ಈ* ಸಮಯದಲ್ಲಿಯೇ ಆತನಿಗೆ ನಿಮ್ಮ ಜೀವಿತವನ್ನು ಸಮರ್ಪಿಸಿರಿ.

---

## ಪ್ರಸಂಗದ ಟಿಪ್ಪಣಿಗಳು

ಅಪೊಸ್ತಲರ ಕೃತ್ಯಗಳು 7ರಲ್ಲಿ ಸ್ತೇಫನನ ಪ್ರಸಂಗದ ವಿಷಯದಲ್ಲಿ ನಾನು ಮಾಡಿದಂತೆ, ಅಪೊಸ್ತಲರ ಕೃತ್ಯಗಳು 13ರಲ್ಲಿಯೂ ಪೌಲನು ತಿಳಿಸಿದ ಹಳೇ ಒಡಂಬಡಿಕೆಯ ಘಟನೆಗಳನ್ನು ನನ್ನ ಓದುಗರು ತಿಳುಕೊಂಡಿರುವದರಿಂದ ಅದನ್ನು ನಾನು ಹೆಚ್ಚು ವಿವರಿಸುವದಿಲ್ಲ. *ನಿಮ್ಮ* ಕೇಳುಗರು ಆ ವಿಷಯವನ್ನು ತಿಳಿಯದೇ ಇದ್ದರೆ, ನೀವು ಹಳೇ ಒಡಂಬಡಿಕೆಯ ಹಿನ್ನಲೆಯನ್ನು ಅವರಿಗೆ ಪರಿಚಯಿಸಬೇಕಾಗುತ್ತದೆ. ನಿಮ್ಮ ಸಿದ್ಧತೆಗಾಗಿ ಹಳೇ ಒಡಂಬಡಿಕೆಯ ಕೆಲವು ವಾಕ್ಯಗಳನ್ನು ತಿಳಿಸಿರುವೆನು.

---

ಟಿಪ್ಪಣಿಗಳು

[1]ಈ ಅಂತಿಯೋಕ್ಯವು ಪಿಸಿದ್ಯ ಬಳಿಯಲ್ಲಿರುತ್ತದೆ, ಅವರು ಪಿಸಿದ್ಯದ ಅಂತಿಯೋಕ್ಯ ಎಂದು ಕರೆದಿರುವರು, ಪೆರ್ಗದ ಅಂತಿಯೋಕ್ಯಕ್ಕೆ ವ್ಯತ್ಯಾಸವಿದೆ. [2]ಅಪೊಸ್ತಲರ ಕೃತ್ಯಗಳು 13:5; 14:1; 17:1, 10, 17; 18:4, 19; 19:8. [3]"ಶೇಮ" ಎಂಬ ಇಬ್ರಿಯ ಪದದ ಅರ್ಥ "ಕೇಳು" ಪ್ರಸಂಗದ ಆರಂಭದ ಪದ. [4]ಸಂತೈಸು, ಅಥವಾ ಪರಾಂಭರಿಸು. [5]ಪೌಲನ ವಾದದಲ್ಲಿ, ಅಪೊಸ್ತಲರಕೃತ್ಯದಲ್ಲಿರುವ ಇತರೆ ಐದು ಪ್ರಸಂಗಗಳು ಸೇರ್ಪಡೆಯಾಗಿವೆ. ಇದು ದೊಡ್ಡ ಪ್ರಸಂಗವಾಗಿದೆ (ಇಪ್ಪತ್ತಾರು ವಚನಗಳು). ಇದರಲ್ಲಿ ಒಂದು ಪ್ರಸಂಗವನ್ನು ಮಾತ್ರ ಸಭಾಮಂದಿರದಲ್ಲಿ ಪ್ರಸಂಗಿಸಲಾಗಿದೆ. [6]ಯೇಸು ಸಭಾಮಂದಿರದಲ್ಲಿ ಕೂತುಕೊಂಡು ಬೋಧಿಸಿದನು (ಲೂಕ 4:20, 21). ಆದರೆ ಪೌಲನು ಸಹಜವಾಗಿ ನಿಂತುಕೊಂಡನು,ಈ ವ್ಯತ್ಯಾಸದ ಕಾರಣವನ್ನು ಅರಿತಿರುವದಿಲ್ಲ. ಒಂದು ವೇಳೆ ಯೇಸು ಮತ್ತು ಪೌಲರು ವಿವಿಧವಾದ ಪ್ರಸಂಗವನ್ನು ನೀಡಿರಬಹುದು, ಆ ಸಮಯದಲ್ಲಿ ವಿವಿಧ ಆಡಳಿತವಿರಬಹುದು. ಪಾಲಿಸ್ತೇನಿನ ಒಳಗೂ ಮತ್ತು ಹೊರಗೂ ಇದ್ದ ಸಭಾಮಂದಿರಗಳಲ್ಲಿ ವಿವಿಧವಾದ ನಿಯಮಗಳ ವ್ಯತ್ಯಾಸವಿರಬಹುದು. [7]"ಅಂತ್ರೊಫಾಮರಿಸಮ್‌ನ" ಅರ್ಥ "ಮಹಾಶಕ್ತಿಯಿಂದ" NIVಯಲ್ಲಿ "ಸರ್ವಶಕ್ತಿ" ಎಂಬುದಾಗಿದೆ. [8]ವಿಮೋಚನಕಾಂಡ 6:1, 6; ಕೀರ್ತನೆ 136:11, 12. [9]"ಆತನು ಗಮನ ಹರಿಸಿದನು" ಎಂಬ ಕೆಲವು ವಾಕ್ಯವಿವೆ. [10]ಧರ್ಮೋಪದೇಶ 1:31; 32:10.

[11]ಧರ್ಮೋಪದೇಶಕಾಂಡ 7:1. [12]ಯಹೋಶುವ 14-19. [13]ಸುಮಾರು 450ವರ್ಷಗಳು ಎಂಬ ವ್ಯಾಖ್ಯಾನದಲ್ಲಿ ತರ್ಜುಮೆಯ ಸಮಸ್ಯೆಯಿದೆ. ವಚನ 20ರಲ್ಲಿ ನ್ಯಾಯಸ್ಥಾಪಕರ ಅವಧಿಯಿರಬಹುದು. ಎಂಬುದಾಗಿದೆ (ಬಹುಶಃ 450 ವರ್ಷಗಳು). ತರ್ಜುಮೆಯು ಸರಿಯಾಗಿದ್ದರೆ, ಐಗುಪ್ತದಲ್ಲಿದ್ದ 450 ವರ್ಷಗಳು (400 ವರ್ಷಗಳಿಗೆ) ಸೇರ್ಪಡೆಯಾಗಿರಬಹುದು, ಮತ್ತು ಅರಣ್ಯ ಪ್ರಯಾಣದ (40 ವರ್ಷ) ಮತ್ತು ದೇಶವನ್ನು ವಶಪಡಿಸಿಕೊಂಡ (ಸುಮಾರು 10 ವರ್ಷಗಳು) ಸೇರ್ಪಡೆಯಾಗಿರಬಹುದು. [14]1 ಸಮುವೇಲ 8:5-9. [15]ಪೌಲ ಅಥವಾ ಸೌಲ ಎಂಬುದು ಇಬ್ರಿಯ ನಾಮವಾಗಿದ್ದು ನಾನು ಬೇನ್ಯಾಮೀನನ ಕುಲದವನು ಎಂದು ಹೇಳಿರುವನು. [16]ಸೌಲನು 40 ವರ್ಷಗಳ ಕಾಲ ಆಳಿದನು ಎಂಬ ಮಾಹಿತಿಯು ಹಳೇ ಒಡಂಬಡಿಕೆಯಲ್ಲಿರುವದಿಲ್ಲ. [17]1 ಸಮುವೇಲ 15:26. [18]ಈ ವ್ಯಾಖ್ಯಾನವು ಹಳೇ ಒಡಂಬಡಿಕೆಯಲ್ಲಿರುವದಿಲ್ಲ. ಆದರೂ 1 ಸಮುವೇಲ 13:14 ಮತ್ತು ಕೀರ್ತ 89:20ರಲ್ಲಿ ಇದರ ಸಾರಾಂಶವಿದೆ. [19]2 ಸಮುವೇಲ 7:12; ಕೀರ್ತನೆ 132:11; ಯೆಶಾಯ 11:1-16. [20]ಯೋಹಾನನ ಕೆಲಸದ ಕುರಿತು ಅವರಿಗೆ ಪರಿಚಯವಿಲ್ಲದಿದ್ದರೆ, ಪೌಲನ ಮಾತುಗಳು ವ್ಯರ್ಥವಾ ಗುತ್ತಿದ್ದವು. ಅವರಲ್ಲಿದ್ದಂತ ಯೋಹಾನನ ಕುರಿತಾದ ತಿಳುವಳಿಕೆಯನ್ನು ಪೌಲನು ಈ ಮೊದಲೇ ಅರಿತುಕೊಂಡಿದ್ದನು (ಸಭೆ ನಡೆಯುವ ಮೊದಲೇ) ಅಥವಾ ಆತ್ಮನಿಂದ ಪ್ರಕಟನೆ ಹೊಂದಿರಬಹುದು.

[21]ಪ್ರಾಯಶಃ ಯೋಹಾನನ ಶಿಷ್ಯನು ಆ ಸ್ಥಳವನ್ನು ಸಂಧಿಸಿರಬಹುದು ಅಪೊಸ್ತಲನು ನಂತರ ಎಫೆಸಕ್ಕೆ ಹೋದ ಹಾಗೆ (18:24-19:4). [22]ಯೋಹಾನನು ನೀಡುತ್ತಿದ್ದ ದೀಕ್ಷಾಸ್ನಾನವನ್ನು ಮಾನಸಾಂತರದ ದೀಕ್ಷಾಸ್ನಾನವೆಂದು ಕರೆ ಯಲಾಗಿದೆ, ಅದು ಯೇಸುವಿನಲ್ಲಿರುವ ನಂಬಿಕೆಗೆ ಸೂಚನೆಯಾಗಿದೆ. [23]ಯೋಹಾನನ ಈ ಮಾತುಗಳನ್ನು ಸುವಾರ್ತೆಗಳು ನಿಶ್ಚಯವಾಗಿ ತಿಳಿಸುವದಿಲ್ಲ, ಆದರೆ ಮತ್ತಾಯ 3:11; ಮಾರ್ಕ 1:7; ಲೂಕ 3:15, 16; ಮತ್ತು ಯೋಹಾನ 1:19, 20, 27ರಲ್ಲಿ ಇದರ

ಸಾರಾಂಶ ನೋಡುತ್ತೇವೆ. [24]ಲೂಕ ಮತ್ತು ಅಪೊಸ್ತಲರ ಕೃತ್ಯದಲ್ಲಿನ ಅನುವಾದವು ಆಧನಿಕ ದಿವಸಕ್ಕೆ ಸಮಾನವಾಗಿವೆ: "ಯಾರ ಪಾದರಕ್ಷೆಗಳನ್ನೂ ಮಿನುಗುವಂತೆ ಮಾಡಲು ನಾನು ಅಯೋಗ್ಯನು." [25]ಮೆಸ್ಸೀಯನು ಬರುವ ಮೊದಲು, ಎಲೀಯನು ಬರುವನೆಂಬ ನಂಬಿಕೆಯು ಯೆಹೂದ್ಯರಲ್ಲಿದದ್ದರಿಂದ; ಯೋಹಾನನು ತಾನು ಎಲೀಯನಲ್ಲವೆಂದು ದೃಢೀಕರಿಸಿದನು. ಯೋಹಾನನು "ಎಲೀಯನ ಆತ್ಮವನ್ನು ಹೊಂದಿದ್ದನೇ" ವಿನಃ ಪುನರುತ್ಥಾನ ಹೊಂದಿದ ಎಲೀಯನಾಗಿರಲಿಲ್ಲ. [26]ತಿಳುವಳಿಕೆಯಿಲ್ಲದ ಗದ್ದಲ ಎಂಬ ಉದಾಹರಣೆಯನ್ನು ನೀಡಬಹುದು. [27]ವಿಲಿಯಂ ಬಾರ್‌ಕ್ಲೆ. [28]ಅಕ್ಷರಶ "ಮರ" ಅಥವಾ "ಕಟ್ಟಿಗೆ" ಎಂಬುದಾಗಿದೆ. [29]ಯೇಸುವನ್ನು ಶಿಲುಬೆಗೆ ಹಾಕಿದ ವೈರಿಗಳಿಗೂ ಮತ್ತು ಯೇಸುವನ್ನು ಹೂಣಿಟ್ಟ ಅವನ ಸ್ನೇಹಿತರ ಕ್ರಿಯೆಗಳ ನಡುವೆ ಯಾವದೇ ವ್ಯತ್ಯಾಸವನ್ನು ಪೌಲನು ನೀಡುರುವದಿಲ್ಲ. ಈ ಎಲ್ಲಾ ಕ್ರಿಯೆಗಳನ್ನು ಯೆರೂಸಲೇಮಿನ ಯೆಹೂದ್ಯರೇ ನಡೆಸಿ, ಪ್ರವಾದನೆಯನ್ನು ನೇರವೇಲಿಸಿದ್ದರು. [30]ಲೂಕನು ವಿವರವಾಗಿ ಪ್ರಸಂಗವನ್ನು ನೀಡಿರುವನು.

[31]40 ದಿವಸಗಳ ಅಂತರದಲ್ಲಿ ಯೇಸು ಕ್ರಿಸ್ತನ ಪುನರುತ್ಥಾನ ಹೊಂದಿ ಕಾಣಿಸಿಕೊಂಡನು (1:3). [32]"ಶುಭ ವಾರ್ತೆಯನ್ನು ಸಾರಿರಿ" ಎಂಬುದು ಗ್ರೀಕ್ ಭಾಷೆಯ ಏಕಪದವಾಗಿದ್ದು ಗ್ರೀಕ್, ಭಾಷೆಯ ಕ್ರಿಯಾ ಪದದಲ್ಲಿ "ಗಾಸ್ಪೆಲ್" ಎಂಬುದಾಗಿದೆ. [33]ಗ್ರೀಕ್ ಭಾಷೆಯಲ್ಲಿ "ಮಕ್ಕಳಾದ ನಮಗೆ" ಎಂಬುದಾಗಿದೆ. NIVಯಲ್ಲಿ "ನಮಗೂ, ಅವರ ಮಕ್ಕಳಿಗೂ" ಎಂಬ ಅನುವಾದವಿದೆ. [34]ಇದಕ್ಕಿಂತಲೂ ಮಿಗಿಲಾದ ಉದಾಹರಣೆಯನ್ನು ನೀಡಲಾಗಿದೆ: "ಆತನು ... ದೇವರ ಚಿತ್ತವನ್ನು ತನ್ನ ಕಾಲದಲ್ಲಿಯೇ ಈಡೇಲಿಸಿದನು"! [35]2:27ರ ಟಿಪ್ಪಣೆಯನ್ನು ಅಪೊಸ್ತಲರ ಕೃತ್ಯಗಳು 1ನೇ ಪುಸ್ತಕದ "ಸುವಾರ್ತೆ ಪ್ರಕಟನೆಯ ಪ್ರಾರಂಭವು ಪರಿಪೂರ್ಣವಾಗಿ ಸಾರಲ್ಪಟ್ಟದ್ದು" ಎಂಬ ಪಾಠವನ್ನು ನೋಡಿರಿ. [36]"ಆತನಲ್ಲಿ" ಎಂಬ ಅಕ್ಷರಶ ವಾಕ್ಯವಿದೆ. ಕ್ರಿಸ್ತನಲ್ಲಿ ಸೇರಿಕೊಳ್ಳುವ ದೀಕ್ಷಾಸ್ನಾನಕ್ಕಾಗಿ ಪೌಲನು ಅವರ ಮನಸ್ಸುಗಳನ್ನು ಸಿದ್ಧಪಡಿಸುತ್ತಿದ್ದನು (ರೋಮಾಪುರ 6:3; ಗಲಾತ್ಯ 3:27). [37]"ಪ್ರತಿಯೊಬ್ಬರು" ಎಂಬ ಪದವನ್ನು ಅಲಕ್ಷಿಸಬೇಡಿ. ಅನ್ಯರು ಇದರಲ್ಲಿ ಸೇರ್ಪಡೆ ಗೊಂಡಿ ದ್ದಾರೆ! [38]"ವಿಮೋಚನೆ" ಎಂಬ ಪದವನ್ನು ಗ್ರೀಕ್ ಭಾಷಾಂತರದಲ್ಲಿ "ನೀತಿ ಹೊಂದಿದವನು" ಎಂಬುದಾಗಿ ತರ್ಜುಮೆಮಾಡಲಾಗಿದೆ (KJV, NIV). [39]ಅಕ್ಷರಶಃ "ಧರ್ಮಶಾಸ್ತ್ರದಲ್ಲಿ" ಎಂಬುದಾಗಿದೆ. [40]ಅನೇಕರ ಮುಖದಲ್ಲಿ ತಿರಸ್ಕಾರ ಛಾಯೆಯು ಇದ್ದದ್ದರಿಂದ ಪೌಲನು ನಕಾರಾತ್ಮಕವಾದ ಪದಗಳಿಂದ ಅಂತ್ಯಗೊಳಿಸಿದನು. ಒಂದು ವೇಳೆ ಸತ್ಯವಿರಬಹುದು, ಇಲ್ಲದೆಯೂ ಇರಬಹುದು. ಪೌಲನು ಪ್ರಸಂಗದಲ್ಲಿ ಎಚ್ಚರಿಕೆಯನ್ನು ನೀಡಿದನು (20:31; KJV).

[41]ಇದು ಸೆಪ್ಟಜೂಯಂಟಿನ ವ್ಯಾಖ್ಯಾನವಾಗಿದೆ. [42]ಪೌಲನು ನಿಶ್ಚಯವಾಗಿ ದೀಕ್ಷಾಸ್ನಾನದ ಅಗತ್ಯತೆಯಿದೆಯೆಂದು ನಂಬಿದ್ದನು (ರೋಮಾಪುರ 6:3, 4; ಗಲಾತ್ಯ 3:26, 27). ಆದರೆ ಅವನ್ನು ಅದನ್ನು ಆರಂಭದಲ್ಲಿಯೇ ಅದನ್ನು ತಿಳಿಸುವ ಅಗತ್ಯತೆಯಿರಲಿಲ್ಲ. ನಾನು ಇತರರೊಂದಿಗೆ ಅಧ್ಯಯನ ಮಾಡುವಾಗ ರಕ್ಷಣೆಯ ಅಗತ್ಯತೆಗಳನ್ನು ಆರಂಭದಲ್ಲಿಯೇ ತಿಳಿಸುವದಿಲ್ಲ. [43]ಲಿಕ್‌ಆ್ಯಜ್ಲೆ.